**ದಿ:-19-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟಿಸವಾಲು : ಎದುರುದಾರರ ಪರ ಶ್ರೀ. ವಿ.ಆರ್.ಬಿ ವಕೀಲರಿಂದ :**

38. ನಾನು ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ತಯಾರಿಸುವಾಗ ವಕೀಲರುಗಳು ಇದ್ದರು ಮತ್ತು ಚಿಕ್ಕರಾಮಯ್ಯ ಸಹ ಇದ್ದರು. ಚಿಕ್ಕರಾಮಯ್ಯನವರು ಹೇಳಿದ ತರಹ ಅವರ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಮತ್ತು ನಾನು ಹೇಳಿದ ತರಹ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ತಯಾರಿಸಲಾಯಿತು. ನಮ್ಮಿಬ್ಬರ ಮುಖ್ಯ ವಿಚಾರಣಾ ಪ್ರಮಾಣ ಪತ್ರಗಳು ಒಂದೇ ರೀತಿ ಇದ್ದವು ಎಂದು ನನಗೆ ಗೊತ್ತಿಲ್ಲ. ನಾವುಗಳು ಹೇಳಿದ ರೀತಿ ನಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರಗಳನ್ನು ತಯಾರಿಸಲಾಗಿರುತ್ತದೆ.

39. ಚಿಕ್ಕಣ್ಣನವರು ಎರಡನೇ ಬಾರಿ ನಮ್ಮನ್ನು ದಾಖಲೆಯನ್ನು ರೆಕ್ಟಿಫೈ ಮಾಡಲು ಕರೆದುಕೊಂಡು ಹೋಗಿರುವುದಿಲ್ಲ. ಸಾಕ್ಷಿ ಮುಂದುವರಿದು ಅವರು ನಮ್ಮನ್ನು ಬಿಟ್ಟು ಹೋದ ಸ್ವತ್ತುಗಳನ್ನು ಸೇರಿಸಲು ಮರಣ ಶಾಸನ ಮಾಡಲು ಕರೆದು ಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ.

40. ನನಗೆ ಈ ದಾವೆಯ ಪ್ರತಿವಾದಿ ಗಂಗಮ್ಮನವರ ಪರಿಚಯವಿದೆ. ಗಂಗಮ್ಮನವರು ಸಾಕ್ಷಿ ಹೇಳಲು ನ್ಯಾಯಾಲಯಕ್ಕೆ ಬಂದಾಗ ನಾನು ಮತ್ತು ಹೇಮಂತ್ ಕುಮಾರ್ ರವರು ಹಲ್ಲೆ ಮಾಡಿದ್ದೇವೆ ಎಂದು ಪೊಲೀಸ್ ದೂರು ದಾಖಲಾಗಿತ್ತು ಎಂದರೆ ಸಾಕ್ಷಿಯು ಅದು ಸುಳ್ಳು ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರಿದು ನಾನು ಮತ್ತು ಹೇಮಂತ್ ರವರು ಸಾಕ್ಷಿ ಹೇಳಲು ನ್ಯಾಯಾಲಯಕ್ಕೆ ಬಂದಾಗ ವಿಶ್ವನಾಥ್, ಕಮಲೇಶ್, ನಾರಾಯಣಸ್ವಾಮಿ, ವೆಂಕಟೇಶ್ ಮತ್ತು ಇನ್ನಿಬ್ಬರು ನಮ್ಮ ಮೇಲೆ ಹಲ್ಲೆ ಮಾಡಿರುತ್ತಾರೆ. ನೀವು ನಿಮ್ಮ ಮೇಲೆ ಹಲ್ಲೆ ಮಾಡಿದ ಬಗ್ಗೆ ದೂರನ್ನು ನೀಡಿದ್ದೀರಿಯೇ ಎಂಬ ಪ್ರಶ್ನೆಗೆ ಸಾಕ್ಷಿಯು ನಾವು ದೂರು ಕೊಡುವ ಮೊದಲೇ ಗಂಗಮ್ಮನವರು ನಮ್ಮ ಮೇಲೆ ಪೊಲೀಸ್ ದೂರನ್ನು ನೀಡಿದ್ದರು ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರಿದು ಆನಂತರ ನಾವು ದೂರನ್ನು ನೀಡಿರುತ್ತೇವೆ ಎಂದು ನುಡಿಯುತ್ತಾರೆ. ಗಂಗಮ್ಮನವರು ನೀಡಿದ ದೂರಿನಂತೆ ತನಿಖೆಯನ್ನು ನಡೆಸಿ ನಮ್ಮ ವಿರುದ್ಧ ಸಿ.ಸಿ. 30387/2019 ರಂತೆ 5 ನೇ ಎಸಿಎಂಎಂ ನ್ಯಾಯಾಲಯದಲ್ಲಿ ದೋಷಾರೋಪಣಾ ಸಲ್ಲಿಸಿ ವಿಚಾರಣೆ ನಡೆಯುತ್ತಿದೆ ಎಂದರೆ ಸರಿ. ಆ ಮೊಕದ್ದಮೆಯಲ್ಲಿ ನಾನು 2 ನೇ

ಆರೋಪಿ ಎಂದರೆ ಆ ರೀತಿಯಾಗಿ ಅವರು ನೀಡಿದ್ದಾರೆ ಎಂದು ನುಡಿಯುತ್ತಾರೆ.

41. ಚಿಕ್ಕಣ್ಣ ಅಲಿಯಾಸ್ ಮಾಸ್ತಿ ಗೌಡರವರಿಗೆ ಆರೋಗ್ಯ ಸಮಸ್ಯೆ ಉಂಟಾಗಿ ಆಸ್ಪತ್ರೆ ದಾಖಲಾದ ವಿಚಾರ ನಿಮಗೆ ಗೊತ್ತಿದೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ಅವರು ಆರೋಗ್ಯವಾಗಿದ್ದರು ಅವರು ಆಸ್ಪತ್ರೆಗೆ ದಾಖಲಾಗಿರಲಿಲ್ಲ ಎಂದು ನುಡಿಯುತ್ತಾರೆ. ಅವರಿಗೆ ಹೃದಾಯಾಘಾತವಾದ ಬಗ್ಗೆ ಅವರು ಮರಣ ಹೊಂದಿದ ನಂತರ ನನಗೆ ನನ್ನ ಸ್ನೇಹಿತರು ವಿಚಾರವನ್ನು ತಿಳಿಸಿರುತ್ತಾರೆ. ಅದಕ್ಕಿಂತ ಮುಂಚೆ ಅವರಿಗೆ ಹೃದಾಯಾಘಾತವಾದ ಬಗ್ಗೆ ನನಗೆ ಗೊತ್ತಿಲ್ಲ. 1995 ರಲ್ಲಿ ಹೃದಾಯಾಘಾತವಾಗಿತ್ತು ಎಂದರೆ ಆ ಬಗ್ಗೆ ನನಗೆ ನೆನಪಿಲ್ಲ.

42. ಚಿಕ್ಕಣ್ಣ ಅಲಿಯಾಸ್ ಮಾಸ್ತಿ ಗೌಡರವರು ನಾನು ಹೇಳಿದಂತೆ 2 ದಾಖಲೆಗಳನ್ನು ಮಾಡಿಲ್ಲ ಎಂದು ಗಂಗಮ್ಮ ಮತ್ತು ಇತರರು ಸ್ವತ್ತಿನಲ್ಲಿ ಭಾಗವನ್ನು ಕೇಳಿ ಮೂಲ ದಾವಾ ಸಂಖ್ಯೆ 8804/2015 ರಂತೆ ವಿಭಾಗಕ್ಕಾಗಿ ದಾವೆ ಹೂಡಿದ ಬಗ್ಗೆ ನನಗೆ ನೆನಪಿಲ್ಲ. ಗಂಗಮ್ಮನವರು ಹೇಮಂತ್ ರವರ ಮೇಲೆ ಕ್ರಿಮಿನಲ್ ಮೊಕದ್ದಮೆ ಸಲ್ಲಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಗುಣಶೀಲರವರು ಹೇಮಂತ್ ರವರ ಮೇಲೆ ಕ್ರಿಮಿನಲ್ ಮೊಕದ್ದಮೆ ಸಲ್ಲಿಸಿದ ಬಗ್ಗೆ ನನಗೆ ಗೊತ್ತಿಲ್ಲ.

43. ಮಾಸ್ತಿ ಗೌಡರ ಹೆಂಡತಿ, ಗಂಡು ಮತ್ತು ಹೆಣ್ಣು ಮಕ್ಕಳ ಹೆಸರಿನಲ್ಲಿ ಜಂಟಿ ಖಾತೆಯಾದ ನಂತರ ನಾನು, ಹೇಮಂತ್ ಮತ್ತು ಚಿಕ್ಕರಾಮಯ್ಯರವರು ಸೇರಿ ಮಾರ್ಚ್ 2015 ರಲ್ಲಿ ಚಿಕ್ಕಣ್ಣ ಅಲಿಯಾಸ್ ಮಾಸ್ತಿ ಗೌಡರ ಹೆಸರಿನಲ್ಲಿ ನಿ.ಪಿ.1 ಮತ್ತು 2 ನ್ನು ಸೃಷ್ಟಿಸಿದ್ದೇವೆ ಎಂದರೆ ಸುಳ್ಳು. ಯಾವ ಕಾಲಕ್ಕೂ ಚಿಕ್ಕಣ್ಣ ಅಲಿಯಾಸ್ ಮಾಸ್ತಿ ಗೌಡರವರು ಯಾವುದೇ ದಾಖಲೆ ಬರೆದಿಲ್ಲ ಎಂದರೆ ಸುಳ್ಳು. ನಾನು ಹೇಳಿದಂತೆ ಯಾವ ಕಾಲಕ್ಕೂ ಚಿಕ್ಕಣ್ಣ ಅಲಿಯಾಸ್ ಮಾಸ್ತಿ ಗೌಡರವರು ನನ್ನನ್ನು ಮತ್ತು ಚಿಕ್ಕರಾಮಯ್ಯನವರನ್ನು ಕರೆದು ಕೊಂಡು ತುಮಕೂರಿಗೆ ಹೋಗಿಯೇ ಇಲ್ಲ ಎಂದರೆ ಸುಳ್ಳು. ನಾನು, ಚಿಕ್ಕರಾಮಯ್ಯ ಮತ್ತು ಹೇಮಂತ್ ರವರು ಸೇರಿ ನಿ.ಪಿ.1 ಮತ್ತು 2 ಕ್ಕೆ ಚಿಕ್ಕಣ್ಣ ಅಲಿಯಾಸ್ ಮಾಸ್ತಿ ಗೌಡರವರ ಸಹಿಯನ್ನು ಫೋರ್ಜರಿ ಮಾಡಿ ದಾಖಲೆ ಸೃಷ್ಟಿಸಿದ್ದೇವೆ ಎಂದರೆ ಸುಳ್ಳು.

44. ಗಂಗಮ್ಮ, ಅವರ ಹೆಣ್ಣು ಮಕ್ಕಳಿಗೆ ಮತ್ತು ವಿಶ್ವನಾಥನಿಗೆ ಕಾನೂನು ಬದ್ಧವಾಗಿ ಬರಬೇಕಾದ ಭಾಗವನ್ನು ತಪ್ಪಿಸುವುದಕ್ಕೋಸ್ಕರ ನಿ.ಪಿ.1 ಮತ್ತು 2 ನಾವುಗಳು ಸೇರಿ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಚಿಕ್ಕಣ್ಣ ಅಲಿಯಾಸ್ ಮಾಸ್ತಿ ಗೌಡರವರು ಮರಣ ಹೊಂದುವ ಮೊದಲು ಮತ್ತು ಆ ಸಮಯದಲ್ಲಿ ಮಾಸ್ತಿ ಗೌಡರಿಗೂ ಮತ್ತು ಹೇಮಂತ್ ಕುಮಾರ್ ರವರಿಗೂ ಮನಸ್ತಾಪವಿತ್ತು ಎಂದರೆ ಸುಳ್ಳು.

ಮಾಸ್ತಿ ಗೌಡರಿಗೂ ಮತ್ತು ಹೇಮಂತ್ ಕುಮಾರ್ ರವರಿಗೂ ಮನಸ್ತಾಪವಿತ್ತೇ ಎಂದು ನಾನು ಹೇಮಂತ್ ಕುಮಾರ್ ರವರಲ್ಲಿ ಕೇಳಿರುವುದಿಲ್ಲ. ಮಾಸ್ತಿ ಗೌಡರಿಗೂ ಮತ್ತು ಹೇಮಂತ್ ಕುಮಾರ್ ರವರಿಗೂ ಮನಸ್ತಾಪವಿತ್ತು ಎಂದು ಹೇಮಂತ್ ಕುಮಾರ್ ಹೇಳಿದ್ದಾರಾ ಎಂದರೆ ಸಾಕ್ಷಿಯು ಅವರಿಗೆ ಯಾವತ್ತಿಗೂ ಮನಸ್ತಾಪ ಇರಲಿಲ್ಲ ಎಂದು ನುಡಿಯುತ್ತಾರೆ.

45. ಹೇಮಂತ್ ಕುಮಾರ್ ರವರು ಕುಡಿಯುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಮದ್ಯಪಾನ ಮಾಡುವುದಿಲ್ಲ. 2015 ರಿಂದ ನಾನು ಮತ್ತು ಹೇಮಂತ್ ಕುಮಾರ್ ರವರು ಒಂದಾಗಿ ಮದ್ಯಪಾನ ಮಾಡುವ ಗೆಳೆಯರು ಎಂದರೆ ಸರಿಯಲ್ಲ. ಹೇಮಂತ್ ಕುಮಾರ್ ರವರಿಗೆ ತೊಂದರೆಯಾದರೆ ನನಗೆ ತೊಂದರೆಯಾಗುತ್ತದೆ ಎಂದರೆ ಹಾಗೇನಿಲ್ಲ. ನಾನು ಮತ್ತು ಹೇಮಂತ್ ಕುಮಾರ್ ರವರು ಮದ್ಯಪಾನ ಮಾಡುವ ಗೆಳೆಯರಾಗಿದ್ದರಿಂದ ಅವರಿಗೆ ಸಹಾಯ ಮಾಡಲು ನಿ.ಪಿ.1 ಮತ್ತು 2 ನ್ನು ಸುಳ್ಳಾಗಿ ಸೃಷ್ಟಿಸಿ ಅವರ ಪರವಾಗಿ ಸುಳ್ಳು ಪ್ರಮಾಣ ಪತ್ರವನ್ನು ತಯಾರಿಸಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸುಳ್ಳು. ಹೇಮಂತ್ ಕುಮಾರ್ ರವರು ಮಾಡಿದ ಹಣ ಮತ್ತು ಮದ್ಯಪಾನದ ಆಮಿಷಕ್ಕೆ ಒಳಗಾಗಿ ಅವರ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

46. ಯಾವ ಕಾಲಕ್ಕೂ ನನ್ನ ಮತ್ತು ಚಿಕ್ಕರಾಮಯ್ಯನವರ ಸಮಕ್ಷಮ ತುಮಕೂರಿನಲ್ಲಿ ಯಾವುದೇ ದಾಖಲೆಯನ್ನು ಚಿಕ್ಕಣ್ಣ ಅಲಿಯಾಸ್ ಮಾಸ್ತಿ ಗೌಡರು ತಯಾರಿಸಿಯೇ ಇಲ್ಲ ಎಂದರೆ ಸರಿಯಲ್ಲ. ಸಿಬಿಸಿ ಎನ್ನುವ ಯಾವುದೇ ಬಿಕ್ಲಂದಾರರೇ ಇಲ್ಲ ಅದು ನಾವು ಸೃಷ್ಟಿಸಿದಂತಹ ವ್ಯಕ್ತಿ ಎಂದರೆ ಸುಳ್ಳು. ನಿ.ಪಿ.1 ಮತ್ತು 2 ದಾಖಲೆಗಳನ್ನು ನಾನು, ಚಿಕ್ಕರಾಮಯ್ಯ ಮತ್ತು ಹೇಮಂತ್ ಕುಮಾರ್ ರವರು ಬೆಂಗಳೂರಿನಲ್ಲಿ ಕುಳಿತು ತಯಾರಿಸಿದ್ದು ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಃ</u>** ವಾದಿ ಪರ ವಕೀಲರು ಹೆಗ್ಗನಹಳ್ಳಿ ಯಾವ ತಾಲ್ಲೂಕು, ಯಾವ ಜಿಲ್ಲೆಯಲ್ಲಿ ಬರುತ್ತದೆ ಎಂದು ಸಾಕ್ಷಿದಾರರಲ್ಲಿ ಕೇಳುತ್ತೇನೆ ಎಂದು ಹೇಳಿದ್ದು ಅದನ್ನು ಎದುರುದಾರರ ವಕೀಲರು ಸಾಕ್ಷಿಗೆ ಪಾಟಿ ಸವಾಲಿನಲ್ಲಿ ಕೇಳಿದ್ದರಿಂದ ಅದರಲ್ಲಿ ಯಾವುದೇ ಆಂಬಿಗ್ಯುಟಿ ಬರದೇ ಇದ್ದುದ್ದರಿಂದ ಈ ವಿಚಾರದಲ್ಲಿ ಮರು ವಿಚಾರಣೆ ಮಾಡಬೇಕೆಂಬ ಪ್ರಾರ್ಥನೆಯನ್ನು ತಳ್ಳಿಹಾಕಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಮಮ್ತಾಜ್)**
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು.**